ನೇತ್ರಾ ಸುಮಾ, ಬಿಂಕದ ಕಟ್ಟೆ

*ಅಂಕಲ್, ನಾ ನಗದೆ ಇದ್ರೂ ಇಲ್ಲೊಬ್ಬ ಹುಡುಗ ನನ್ನನ್ನು ಕಂಡ ಕೂಡಲೆ ನೀ ಬಂದು ನಿಂತಾಗ ನಿಂತು ನೀ ನಕ್ಕಾಗ... ಅಂತ ಸಾಂಗ್ ಹಾಡ್ತಾನೆ. ಯಾಕಿರಬಹುದು?*



ಓ! ನಿನ್ನ ಮುಖವೂ ಸದಾನಂದರ ಮುಖದಂತೆಯೇ ಇದೆ ಎಂದಾಯಿತು!

ಹಾಡ್ಯ ಬಿ. ಜಯಾನಂದ, ಮೈಸೂರು

*ಭಗವಂತ, ಭೂತ ಇರುವ ಬಗೆಗೆ ನಿಮ್ಮ ಖಚಿತ ಉತ್ತರವೇನು?*

ಖಂಡಿತ ಇವೆ; ಹೆದರಿದವನ ಮನದಲ್ಲಿ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್

*ಆಧ್ಯಾತ್ಮಿಕ ವ್ಯಕ್ತಿಗೂ, ಧಾರ್ಮಿಕ ವ್ಯಕ್ತಿಗೂ ಇರುವ ವ್ಯತ್ಯಾಸವೇನು?*

ಅವನಿಗೆ ಪರ ಮುಖ್ಯ, ಇವನಿಗೆ ದ್ವಾಪರ!

ಎನ್. ವಸಂತಾ, ಕತ್ತರಗುಪ್ಪ

*ಭೂಗಳ್ಳರು ಮತ್ತು ಮೈಗಳ್ಳರು ಇರುವ ಒಂದೇ ಜಾಗ ಯಾವುದು ರಾಂಜಿ?*

ಜಾಗ ಒಂದಲ್ಲ, ಎರಡು. ವಿಧಾನಸೌಧ, ಸ್ಮಶಾನ!

ಅಮರಯ್ಯ ಪತ್ರಿಮಠ, ಸುರಪೂರ

*ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ, ಪ್ರೀತಿ ಬಲ್ಲವನಿಗೆ...?*



ಅಪ್ಪ ಗೆಟೌಟ್ ಎಂದರೆ ಮನೆ ಇಲ್ಲ, ಹಣ ಇಲ್ಲ, ಪ್ರೇಯಸಿಯೇ ಗೆಟೌಟ್ ಎಂದರೆ ಊಟವೂ ಇಲ್ಲ, ಮಾತೂ ಇಲ್ಲ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಶಾರೀರಿಕ ಗಾಯ ಮಾಯುವುದು ಸುಲಭ, ಮಾನಸಿಕ ಗಾಯ ಮಾಯುವುದು ಸುಲಭವಲ್ಲ. ಏಕೆ?*

ಮಾನಸಿಕ ಗಾಯಕ್ಕೆ ಮುಲಾಮು ಹಚ್ಚಲು, ಬ್ಯಾಂಡೇಜ್ ಸುತ್ತಲು ಆಗದಿರುವುದರಿಂದ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಪ್ರೀತಿಯಿಂದ ನೀಲಿ ಕಣ್ಣಿನ ಹುಡುಗ ಎಂದರೆ ತಪ್ಪಾಗುವುದೆ?*

ನೀಲಿ ಫೋನಿನ ಹುಡುಗ ಎನ್ನಬೇಡಿ ಅಷ್ಟೆ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಮೋಕ್ಷಕ್ಕೂ ಕಪಾಳಮೋಕ್ಷಕ್ಕೂ ಏನು ವ್ಯತ್ಯಾಸ?*

ಭಕ್ತಿ ಇದ್ದರೆ ಮೋಕ್ಷ, ಬತ್ತಿ ಇಟ್ಟರೆ ಕಪಾಳಮೋಕ್ಷ!

ಜಿ.ಕಾಂತರಾಜು, ಗೌರಿಬಿದನೂರು

*ಪ್ರತಿಯೊಂದಕ್ಕೂ ಆರಂಭ ಮತ್ತು ಅಂತ್ಯವಿದೆ. ಆದರೆ ಆಕಾಶಕ್ಕೇಕಿಲ್ಲ?*

ಇದೆಯಲ್ಲಾ, ಆ ಇಂದ ಆರಂಭ, ಶ ಇಂದ ಅಂತ್ಯ!

ಡಿ.ಕೆ.ರಾಜ್, ಗದಗ

*ಹುಡುಗಿ ಒಲಿಯುವುದು ಗುಲಾಬಿಗೆ ಮಾತ್ರವಾ?*

ಲಿಕ್ಕರ್ ಲಾಬಿ, ಹಣದ ಲಾಬಿ, ಸಾಫ್ಟ್‌ವೇರ್ ಲಾಬಿಗೂ ಒಲಿಯುತ್ತಾಳೆ!

ಸಂತೇಬೆನ್ನೂರು ಫೈಜ್ನಟ್ರಾಜ್, ಸಂತೇಬೆನ್ನೂರು

*ಬಹುಮಾನಿತ ಪ್ರಶ್ನೆ ಅಂದ್ರೆ ಬಹಳ ತೂಕದ್ದೇ ಕೇಳಬೇಕಾ ಗುರು?*

ಹಾಗೇನಿಲ್ಲ; ಗುಲಗಂಜಿ ತೂಕಕ್ಕೆ ಅಪರಂಜಿ ಗುಣ ಇದ್ದರೆ ಸಾಕೇ ಸಾಕು!

ಪಿ.ಜೆ. ರಾಘವೇಂದ್ರ, ಮೈಸೂರು

*ಏಕಪತ್ನಿವ್ರತಸ್ಥ ಶ್ರೀರಾಮ, ದ್ವಿಪತ್ನಿವ್ರತಸ್ಥ...?*

ಕುಮಾರ, ಹೀಗೆಲ್ಲಾ ದೊಡ್ಡವರ ಬಗ್ಗೆ ಪ್ರಶ್ನಿಸಬಾರದು!

ಕಾಡನೂರು ರಾಮಶೇಷ, ಹುಲಿಮಂಗಲ

*ನಗ್ನತೆ ಎನ್ನುವುದು ನೋಟದಲ್ಲಿಲ್ಲ, ಯೋಚನೆಯಲ್ಲಿದೆ ಎಂದಿದ್ದಾರಲ್ಲ ಪೂಜಾಗಾಂಧಿ?*

ಎರಡೂ ತಪ್ಪು, ಅದು ಇರುವುದು ಸೆಲ್ ಫೋನ್‌ನ ಎಂಎಂಎಸ್‌ನಲ್ಲಿ ಎಂದರಂತೆ ಸಚಿವ ಕಾಮಣ್ಣನವರ್!

ಎಸ್. ಶ್ರೀಧರ್, ಬೆಂಗಳೂರು

*ಮನುಷ್ಯ ನಿಯಮ ಮೀರಿ ನಡೆದರೆ ಏನಾಗುತ್ತದೆ?*

ಸಿಗ್ನಲ್ ಜಂಪ್ ಮಾಡಿದಿರಿ, ಫೈನ್ ಕಟ್ಟಿ ಎಂದು ಮನೆಗೆ ನೋಟೀಸ್ ಬರುತ್ತದೆ!

## ಬಹುಮಾನಿತ ಪ್ರಶ್ನೆ

ವಿ.ಹಮೀದ್, ವಿಟ್ಲ

*ಪ್ರೇಯಸಿಗೆ ಒಂದು ಮುತ್ತು ಕೊಟ್ಟಾಗ ಇನ್ನೊಂದು ಅಂತಾಳೆ. ಆದರೆ ಹೆಂಡತಿ ಹಾಗೆ ಹೇಳುವುದಿಲ್ಲವಲ್ಲ?*

ಪ್ರೇಯಸಿ ಬಿಜೆಪಿಯಂತೆ ಛಾನ್ಸ್ ಸಿಕ್ಕಾಗ ಸಿಕ್ಕಿದಷ್ಟೂ ಕೊಳ್ಳೆ; ಹೆಂಡತಿ ಕಾಂಗ್ರೆಸ್– ನಿಧಾನವಾಗಿ ಸಕಲವೂ ಕೊಳ್ಳೆ!

ಕಲಾವಿದ ಸೀನು, ಚಿತ್ರದುರ್ಗ

*ಹುಡುಗಿಯರು ಲೈಬ್ರರಿಗಿಂತ ಬ್ಯೂಟಿ ಪಾರ್ಲರ್‌ಗೆ ಭೇಟಿ ನೀಡುವುದು ಹೆಚ್ಚು, ಯಾಕೆ?*

ಬುಕ್ಸ್‌ಗಿಂತ ಲುಕ್ಸ್ ಮುಖ್ಯ!

ನರಸಿಂಹ ಎಂ. ಪೈ, ಕಾಸರಕೋಡ

*ಸಮವಸ್ತ್ರ ಯಾವುದರ ಸಂಕೇತ?*

ಟೈಲರ್‌ಗಳಿಗೆ ಹೋಲ್‌ಸೇಲ್ ಕಂಟ್ರಾಕ್ಟ್, ಸಂಸ್ಥೆಗಳಿಗೆ ಕಮಿಷನ್ ದೊರೆತುದರ ಸಂಕೇತ!

ಡಿ.ಎಲ್. ನಾಗರಾಜ್, ಚನ್ನಗಿರಿ

*ಅತ್ತರೂ, ನಕ್ಕರೂ ಕಣ್ಣೀರು ಬರಲು ಕಾರಣವೇನು?*



ಕಣ್ಣಿಗೆ ಸುಖ– ದುಃಖಗಳನ್ನು ಸಮವಾಗಿ ಸ್ವೀಕರಿಸುವ ಗುಣ ಇದೆಯಂತೆ!

ಕೆ.ಮೈಥಿಲಿಕೃಷ್ಣ, ಬೆಂಗಳೂರು

*ಎಲ್ಲರೂ ಅಣ್ಣಾ ಹಜಾರೆಯಾದರೆ?*

ಜಿಂದಾಲ್ ಆಸ್ಪತ್ರೆಗೆ ಒಳ್ಳೆಯ ವ್ಯಾಪಾರ!

ಕೆ.ಎಸ್. ಕನಕಾಂಬಿಕ, ಶಂಕರಘಟ್ಟ

*ಸಾಲ ಪಡೆದವನಿಗಿಂತ ಸಾಲ ಕೊಟ್ಟವನೇ ತಲೆ ಮರೆಸಿಕೊಂಡು ಓಡಾಡಲು ಕಾರಣವೇನು ಗುರೂ?*

ಪಡೆದವನು ಪಡೆದ ಚಿಕ್ಕ ಸಾಲ ಹಿಂತಿರುಗಿಸಿ ದೊಡ್ಡ ಸಾಲಕ್ಕೆ ಪೀಡಿಸುವನೆಂಬ ಭಯ!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ನಿವೃತ್ತಿಯ ನಂತರ ಕನಸು ಹೆಚ್ಚಾಗಿ ಬೀಳುತ್ತಿರಲು ಕಾರಣ?*

ಹೆಚ್ಚಾದ ನಿದ್ರೆ!

■ ರಾಮ್